ದರದಲ್ಲಿ ವಿತರಿಸುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯೊಂದಕ್ಕೆ ತಿಂಗಳಿಗೆ 1,83,150 ರೂಪಾಯಿಗಳಂತೆ ವಾರ್ಷಿಕ 21,97,800 ರೂಪಾಯಿಗಳು ಬೇಕಾಗುತ್ತವೆ.

ಕರ್ನಾಟಕದ ಪ್ರತಿ ತಿಂಗಳ ಬೇಡಿಕೆ 66475 ಕೆ.ಎಲ್. ಇದ್ದು, ಅಕ್ಟೋಬರ್ ಅಂತ್ಯದವರೆಗೆ ಕೇಂದ್ರ ಸರ್ಕಾರ ಕೇವಲ 45795 ಕೆ.ಎಲ್. ನೀಡುತ್ತಿತ್ತು. ಪ್ರಸ್ತುತ ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ 5–11–90 ರಂದು ಅಂದಿನ ಕೇಂದ್ರದ ಪೆಟ್ರೋಲಿಯಂ ಮತ್ತು ರಾಸಾಯನಿಕ ಖಾತೆಯ ಸಚಿವರಿಗೆ ಆರೆ ಸರ್ಕಾರಿ ಪತ್ರದ ಮೂಲಕ ಹೆಚ್ಚಿನ ಸೀಮೆ ಎಣ್ಣೆ ಸರಬರಾಜಿಗೆ ಒತ್ತಾಯಿಸಿದ್ದರು. ಸಮಸ್ಯೆಯನ್ನು ಪರಿಗಣಿಸಿ ನವೆಂಬರ್ ತಿಂಗಳಿಗೆ 52941 ಕೆ.ಎಲ್. ಸೀಮೆ ಎಣ್ಣೆಯನ್ನು ಒದಗಿಸಿದ್ದಾರೆ. ಇದು ತಾತ್ಕಾಲಿಕವಾಗಿ ಪರಿಸ್ಥಿತಿ ಸುಧಾರಣೆಗೆ ತಕ್ಕಮಟ್ಟಿಗೆ ಸಹಾಯಕವಾಗಿದ್ದು ಇನ್ನುಳಿದ ಬೇಡಿಕೆಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು.

ಆದಾಗ್ಯೂ ಜೀವನಾವಶ್ಯಕವಾಗಿರುವ ದೀಪ ಮತ್ತು ಅಡಿಗೆ ಬಳಕೆಗೆ ಬಿಟ್ಟು ಪರ್ಯಾಯ ಮೂಲ ಇರುವ ಪಂಪು ಸೆಟ್‌ಗಳಿಗೆ ಸೀಮೆ ಎಣ್ಣೆ ಪೂರೈಸಲು ಕಠಿಣ ಸಮಸ್ಯೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ರಿಯಾಯಿತಿ ದರದಲ್ಲಿ ಕೃಷಿ ಪಂಪು ಸೆಟ್‌ಗಳಿಗೆ ಸೀಮೆ ಎಣ್ಣೆ ಕೊಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

6. ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸಿಬ್ಬಂದಿ ಕೊರತೆ ಬಗ್ಗೆ:

ಶ್ರೀ ಎಚ್. ಏಕಾಂತಯ್ಯ (ಚಿತ್ರದುರ್ಗ) :– ಮಾನ್ಯ ಅಧ್ಯಕ್ಷರೇ, ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅರಿವಳಿಕೆ ವೈದ್ಯ ಸಿಬ್ಬಂದಿ ಕೊರತೆಯಿಂದಾಗಿ ಕಳೆದ ಹಲವಾರು ದಿನಗಳಿಂದ ಶ್ವಸ ಚಿಕಿತ್ಸೆಗಳನ್ನು ರದ್ದು ಪಡಿಸಿರುವ ಬಗ್ಗೆ ಇಂದು ಸದನದಲ್ಲಿ ಪ್ರಸ್ತಾಪಿಸಲು ತಮ್ಮ ಅನುಮತಿ ಕೋರುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು) :– ಮಾನ್ಯ ಅಧ್ಯಕ್ಷರೇ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಇಲ್ಲಿ ಕೆಲಸ ಮಾಡುತ್ತಿರುವ ಅನೆಸ್ತೇಶಿಯಾ ವೈದ್ಯಾಧಿಕಾರಿಗಳು, ವಿಕ್ಟೋರಿಯಾ ಆಸ್ಪತ್ರೆ, ವಾಣಿವಿಲಾಸ ಆಸ್ಪತ್ರೆ ಮತ್ತು ಅದಕ್ಕೆ ಸಂಬಂಧಿಸಿದ ಮಕ್ಕಳ ಆಸ್ಪತ್ರೆಯನ್ನೂ ಸಹ ನೋಡಿಕೊಳ್ಳಬೇಕಾಗುತ್ತದೆ. ಹೀಗಿದ್ದರೂ ಅನೆಸ್ತೇಶಿಯಾ ವೈದ್ಯಾಧಿಕಾರಿಗಳ ಕೊರತೆಯಿಂದಾಗಿ ಶಸ್ತ್ರ ಚಿಕಿತ್ಸೆಯನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಯಾವುದೇ ಕಾರಣದಿಂದ ನಿಲ್ಲಿಸಿರುವುದಿಲ್ಲ. ವಿಕ್ಟೋರಿಯಾ ಆಸ್ಪತ್ರೆಯು ಬೆಂಗಳೂರು ವೈದ್ಯಕೀಯ ಕಾಲೇಜಿನ ಅಧೀನದಲ್ಲಿ ಇದ್ದು, ಅಲ್ಲಿ 6 ಜನ ಅನೆಸ್ತೇಶಿಯಾ ವೈದ್ಯರುಗಳ ಹುದ್ದೆಗಳು ಖಾಲಿ ಇದ್ದು, ಅವರುಗಳಲ್ಲಿ ಒಬ್ಬ ಪ್ರೋಪೆಸರ್ ಮತ್ತು 5 ಜನ ಉಪನ್ಯಾಸಕರ ಹುದ್ದೆಗಳು ಸೇರಿವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಅನೆಸ್ತೇಶಿಯಾ ವೈದ್ಯಾಧಿಕಾರಿಗಳ ಕೊರತೆ ಇದೆ. ಅಲ್ಲಿಯ ಕೊರತೆಯನ್ನು ಗಮನಿಸಿ, ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ ಆಕುಕ. 823 ಹೆಚ್‌ಎಸ್‌ಹೆಚ್. 90, ದಿನಾಂಕ 29.10.1990ರಲ್ಲಿ ಇಬ್ಬರು ಸಹಾಯಕ ಶಸ್ತ್ರ ಚಿಕಿತ್ಸಕರುಗಳನ್ನು (ಅನೆಸ್ತೇಟಿಸ್ಟ್) ಮಿಂಟೋ ಆಸ್ಪತ್ರೆ, ಬೆಂಗಳೂರು ಇಲ್ಲಿಂದ ಅನ್ಯ ಕರ್ತವ್ಯದ ಮೇರೆಗೆ (ಒ.ಒ.ಡಿ) ವಿಕ್ಟೋರಿಯಾ ಆಸ್ಪತ್ರೆಗೆ ನಿಯೋಜಿಸಿದೆ.

ಉಪನ್ಯಾಸಕ ಹುದ್ದೆಗಳನ್ನು ತುಂಬುವ ಸಲುವಾಗಿ ಸಹಾಯಕ ಶಸ್ತ್ರ ಚಿಕಿತ್ಸಕ ಹುದ್ದೆಗಳಿಂದ ಆಯ್ಕೆ ಮಾಡಲು ಸಂದರ್ಶನವನ್ನು ನಡೆಸಲಾಗಿದೆ. ವಿಕ್ಟೋರಿಯಾ ಆಸ್ಪತ್ರೆಯ ಪರಿಸ್ಥಿತಿಯನ್ನು ನಿಭಾಯಿಸಲು 3 ಜನ ಅನೆಸ್ತೇಶಿಯಾ ವೈದ್ಯಾಧಿಕಾರಿಗಳನ್ನು ನಿಯೋಜನೆಯ ಮೇಲೆ ಆದಷ್ಟು ಶೀಘ್ರವಾಗಿ ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ ಕೆಲವು ವೈದ್ಯಾಧಿಕಾರಿಗಳನ್ನು ಆಯ್ಕೆಮಾಡಿ ಅನೆಸ್ತೇಶಿಯಾ ವಿಷಯದ ಬಗ್ಗೆ ತರಬೇತಿಗೊಳಿಸಲು ಸರ್ಕಾರವು ಪರಿಶೀಲಿಸುತ್ತಿದೆ.

7. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕನ್ನಡದಲ್ಲಿ ಪೋಷಣೆಗಳನ್ನು ಪ್ರಕಟಿಸುವಂತೆ ಕ್ರಮ ಕೈಗೊಳ್ಳುವ ಬಗ್ಗೆ :

Shri Derrick M.R. Fullinfaw :- Respected Speaker, Sir. Bangalore Airport authorities have not made arrangements to make announcements in the regional language i.e., Kannada in the airport for the benefit of large number of persons visiting the airport who have no knowledge of English or Hindi. Owing to the lack of knowledge of English